14. ತಾಲ್ಲೂಕ ಪಂಚಾಯತ್, ಬೀದರ್:

1. ಚೆಕ್ ಡ್ಯಾಮ್	:	06
2. ಕೆರೆ ಹೂಳು ತೆಗೆಯವಿಕೆ	:	02
3. ರಸ್ತೆ ಸುಧಾರಣೆ	:	52
4. ಅಂಬೇಡ್ಕರ್ ಭವನ ದುರಸ್ತಿ	:	02
5. ಶಾಲೆ ನಿರ್ಮಾಣ	:	03
6. ಶಾಲೆ ಕಟ್ಟಡ ದುರಸ್ತಿ	:	01
7. ಚರಂಡಿ ನಿರ್ಮಾಣ	:	38
ಒಟ್ಟು ಕಾಮಗಾರಿಗಳು		104

ಕಾಡಾ ಯೋಜನೆಯಡಿ ಕಾರಂಜಾ ಯೋಜನೆಗೆ ಫೀಲ್ಡ್ ಚಾನೆಲ್ ನಿರ್ಮಿಸುವುದು

1411 (1672) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾಡಾದಿಂದ ಕಾರಂಜಾ ಯೋಜನೆಯ ಫೀಲ್ಡ್ ಚಾನೆಲ್‌ಗಳು, ರೈತರ ಹೊಲಕ್ಕೆ ಹೋಗಲು ದಾರಿ, ನಿಂತ ನೀರನ್ನು ಹೊಲಗಳಿಂದ ತೆಗೆಯಲು ಕಾಮಗಾರಿ ತೆಗೆದುಕೊಂಡಿರುವುದೇ; ಇಲ್ಲದಿದ್ದರೆ ಕಾರಣಗಳೇನು?

ಆ) ಈಗ ಸಧ್ಯದಲ್ಲಿ ಕಾಮಗಾರಿ ಚಾಲನೆಯಲ್ಲಿದೆಯೇ; ಇದ್ದಲ್ಲಿ ಎಷ್ಟನೇ ಕಿ.ಮೀ.ನಲ್ಲಿ ನಡೆಯುತ್ತಿದೆ.

ಇ) ಪ್ರಸ್ತುತ ಸಾಲಿನಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಅನುದಾನ ಎಷ್ಟು? ಇದುವರೆಗೂ ಇದರಲ್ಲಿ ಎಷ್ಟು ಖರ್ಚು ಮಾಡಲಾಗಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಗುಲ್ಬರ್ಗಾ ನೀರಾವರಿ ಯೋಜನೆಯಡಿ ಬರುವ ಯೋಜನೆಗಳಿಗೆ ಸಂಬಂಧಿಸಿದ ಅಚ್ಚುಕಟ್ಟು ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಗುಲ್ಬರ್ಗಾ ಕೇಂದ್ರಸ್ಥಾನವನ್ನಾಗಿ ಸರ್ಕಾರಿ ಆದೇಶ ಸಂಖ್ಯೆ: ನೀಇ 51 ಸಿಯುಕೆ 99, ದಿನಾಂಕ: 18-10-2000 ದಲ್ಲಿ ಆಡಳಿತಾಧಿಕಾರಿಗಳ ಕಛೇರಿಯನ್ನು ತೆರೆಯಲಾಗಿದ್ದು, ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಆ) ಈವರೆಗೆ ಕಾರಂಜಾ ಯೋಜನೆಯ ಬಲದಂಡೆ ಕಾಲುವೆಯ 86 ಕಿ.ಮೀ.ವರೆಗಿನ ಕಾಡಾ ಕೆಲಸಗಳು ಮುಗಿದಿದ್ದು, 86 ನೇ ಕಿ.ಮೀ.ನಿಂದ 131ನೇ ಕಿ.ಮೀ.ವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಪ್ರಸ್ತುತ ಸಾಲಿನಲ್ಲಿ ನೀರಾವರಿ ಯೋಜನಾ ವಲಯ, ಗುಲ್ಬರ್ಗಾ ಕಾಡಾದಡಿಯಲ್ಲಿ ಕಾರಂಜಾ ನೀರಾವರಿ ಯೋಜನೆಯ ಹೊಲಗಾಲುವೆ ನಿರ್ಮಾಣಕ್ಕೆ ರೂ.25.00 ಲಕ್ಷಗಳ ಬಜೆಟ್ ಅನುದಾನ ಒದಗಿಸಲಾಗಿದೆ ಹಾಗೂ ಹೆಚ್ಚಿನ ಅನುದಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅನುದಾನವನ್ನು ಸದುಪಯೋಗಿಸಲು ಕಾಡಾ ಕೆಲಸದ ಸರ್ವೆ ಕೆಲಸಗಳು ಪ್ರಗತಿಯಲ್ಲಿರುತ್ತವೆ.